2020-21 ನೇ ಶೈಕ್ಷಣಿಕ ವರ್ಷದ ವರದಿ

1965 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಯೊಂದಿಗೆ ಆರಂಭವಾದ ವಿವೇಕಾನಂದ ಕಾಲೇಜು 56 ಸಂವತ್ಸರಗಳನ್ನು ಸಾರ್ಥಕವಾಗಿ ಮುಗಿಸಿ 57ನೆಯ ವರ್ಷದ ಕಡೆಗೆ ಹೆಜ್ಜೆಗಳನ್ನು ಹಾಕುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಸಾಧನೆಯ ಹೆಜ್ಜೆಗುರುತುಗಳ ವರದಿಯನ್ನು ಅತ್ಯಂತ ಸಂತೋಷದಿಂದ ನಿಮ್ಮ ಮುಂದಿಡುತ್ತಿದ್ದೇನೆ. ನಮ್ಮ ಕಾಲೇಜು ನ್ಯಾಕ್‌ನಿಂದ ಮರು ಮೌಲ್ಯಮಾಪನಗೊಂಡು 3.30 ಸಿ.ಜಿ.ಪಿ.ಎ. ಅಂಕಗಳೊಂದಿಗೆ 'ಎ' ಗ್ರೇಡ್ ಪಡೆದಿರುವುಲ್ಲದೆ ಯುಜಿಸಿಯಿಂದ College with Potential for Excellance ಎಂಬ ಮಾನ್ಯತೆಯಿಂದ ಪಡೆದುಕೊಂಡಿದೆ.

ಪ್ರಸ್ತುತ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಶ್ರೀನಿವಾಸ ಪೈ, ಸಂಚಾಲಕರಾಗಿ ಶ್ರೀ ಮುರಳಿಕೃಷ್ಣ ಕೆ.ಎನ್., ಕೋಶಾಧಿಕಾರಿಯಾಗಿ ಶ್ರೀ ಜನಾರ್ಧನ ಭಟ್, ವಿವೇಕಾನಂದ ವಿದ್ಯಾವರ್ಧಕ ಸಂಘದ ಪ್ರತಿನಿಧಿಯಾಗಿ ಶ್ರೀ ಗುಣಪಾಲ ಜೈನ್, ಪದನಿಮಿತ್ತ ಕಾರ್ಯದರ್ಶಿಯಾಗಿ ಶ್ರೀ ವಿಷ್ಣು ಗಣಪತಿ ಭಟ್ ಇವರು ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ಮಂಡಳಿಯ ಸದಸ್ಯರಾಗಿ ಶ್ರೀ ರಮಾನಾಥ ಶೆಣೈ, ಶ್ರೀ ಕೃಷ್ಣ ನಾಯ್ಕ, ಶ್ರೀಮತಿ ಶೋಭಾ ಕೊಳತ್ತಾಯ, ಶ್ರೀಮತಿ ಉಷಾ ನಾಯಕ್, ಶ್ರೀ ಅನಂತಕೃಷ್ಣ ನಾಯಕ್ ಕಾರ್ಯನಿರ್ವಹಿಸುತ್ತಿದ್ದಾರೆ. ಮಾತೃಸಂಸ್ಥೆಯಾದ ವಿವೇಕಾನಂದ ವಿದಾವರ್ಧಕ ಸಂಘ ಪುತ್ತೂರು (ರಿ) ಇದರ ಅಧ್ಯಕ್ಷರಾದ ಡಾ. ಕಲ್ಲಡ್ಕ ಪ್ರಬಾಕರ ಭಟ್, ಕಾರ್ಯದರ್ಶಿಗಳಾದ ಡಾ. ಕೆ.ಯಂ.ಕೃಷ್ಣಭಟ್ ಇವರ ಸತತ ಪ್ರೋತ್ಸಾಹ ಮತ್ತು ಬೆಂಬಲವನ್ನು ಈ ಸಂದರ್ಭಸಲ್ಲಿ ನೆನಪಿಸಿಕೊಳ್ಳುತ್ತೇನೆ.

ಪ್ರಸ್ತುತ ವರ್ಷ ಕಾಲೇಜಿನಲ್ಲಿ 91 ಮಂದಿ ಉಪನ್ಯಾಸಕರು ಮತ್ತು 34 ಜನ ಶಿಕ್ಷಕೇತರ ಸಿಬ್ಬಂಧಿಗಳು ಕಾಲೇಜಿನಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಉಪನ್ಯಾಸಕರಲ್ಲಿ 22 ಮಂದಿ ಪಿ.ಎಚ್.ಡಿ ಪದವಿಯನ್ನು ಹೊಂದಿದ್ದು, 10 ಮಂದಿ ಅಧ್ಯಯನದಲ್ಲಿ ತೊಡಗಿದ್ದಾರೆ. ಅಲ್ಲದೆ 12 ಮಂದಿ ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ವಿಶ್ವವಿದ್ಯಾನಿಲಯದ ಅಧ್ಯಯನ ಮತ್ತು ಪರೀಕ್ಷಾ ಮಂಡಳಿಗಳಲ್ಲಿ ಹಲವು ಮಂದಿ ಉಪನ್ಯಾಸಕರು ಉಪನ್ಯಾಸಕರು ಸಕ್ರಿಯವಾಗಿ ಕೆಲಸ ಮಾಡುತ್ತಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.

ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ಕಾಲೇಜು ಆಡಳಿತ ಮಂಡಳಿಯ ವಿವಿಧ ವಿಷಯಗಳಿಗೆ ಸಂಬಂಧಿಸಿ ಉಪನ್ಯಾಸಕರನ್ನು ನೇಮಕಾತಿ ಮಾಡಿದೆ. ಅಲ್ಲದೆ ಅನೇಕ ಮಂದಿ ಉಪನ್ಯಾಸಕರು ಕಾರಣಾಂತರದಿಂದ ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿರ್ಗಮಿಸಿದ್ದಾರೆ. ಇವರೆಲ್ಲರ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಐಕ್ಯುಎಸಿ : ಇದರ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದು, ಸಂಯೋಜಕರಾಗಿ ಭೌತಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಶಿವಪ್ರಸಾದ್ ಕೆ ಎಸ್ ಮತ್ತು ಗಣಕ ವಿಜ್ಞಾನ ವಿಭಾಗ ಮುಖ್ಯಸ್ಥರಾದ **ಸಹಸಂಯೋಜಕರಾಗಿ** ಶ್ರೀ ಪ್ರಕಾಶ್‌ಕುಮಾರ್ ಪಿ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.

ವಿದ್ಯಾರ್ಥಿಗಳ ಸಂಖ್ಯೆ : ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ನಮ್ಮ ಸಂಸ್ಥೆಯ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ಒಟ್ಟು 2293 ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ.

2019-20 ನೇ ಸಾಲಿನ ವಾರ್ಷಿಕ ಪರೀಕ್ಷೆಯ ಫಲಿತಾಂಶ : ಮಂಗಳೂರು ವಿಶ್ವವಿದ್ಯಾನಿಲಯವು ಕಳಡದ ಎಪ್ರಿಲ್/ಮೇ 2020 ರಲ್ಲಿ ನಡೆಸಿದ ಪದವಿ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಶೇಕಡಾ 87.3% ಫಲಿತಾಂಶ ಪಡೆದಿದ್ದು, ಕಾಲೇಜಿಗೆ ಒಟ್ಟು ಮೂರು ರ್‍ಯಾಂಕ್‌ಗಳು ಮತ್ತು ಸ್ವರ್ಣಪದಕಗಳು ಲಭಿಸಿವೆ. ಅಂತಿಮ ಬಿ.ಎಸ್ಸಿಯಲ್ಲಿ ಅನನ್ಯ ಪಾಂಗಲ್ 96.08 ಶೇಕಡಾದೊಂದಿಗೆ ಪಿ.ಎಂ.ಸಿ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಎಂ.ಸಿ.ಜೆ ವಿಭಾಗದಲ್ಲಿ ಸುಷ್ಮ ಸದಾಶಿವ್ ಇವರು ಪ್ರಥಮ ರ್‍ಯಾಂಕ್‌ನ್ನು ಪಡೆದು ನಮ್ಮ ಸಂಸ್ಥೆಗೆ ಕೀರ್ತಿಯನ್ನು ತಂದಿದ್ದಾರೆ. ಈ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಗ್ರಂಥಾಲಯ : ನಮ್ಮ ಗ್ರಂಥಾಲಯದಲ್ಲಿ ಪ್ರಸ್ತುತಒಟ್ಟು 70625 ಗ್ರಂಥಗಳಿವೆ. ಅಲ್ಲದೆ ಸ್ನಾತಕೋತ್ತರ ವಿಭಾಗದಲ್ಲಿ ಒಟ್ಟು 2072 ಗ್ರಂಥಗಳಿವೆ. ವಾಚನಾಲಯಕ್ಕೆ 203 ವಿವಿಧ ವಿಷಯಗಳಿಗೆ ಸಂಬಂಧಿಸಿದ ಮ್ಯಾಗಝಿನ್ ಹಾಗೂ 19 ದಿನಪತ್ರಿಕೆಗಳನ್ನು ತರಿಸಲಾಗುತ್ತಿದೆ. ಸಿ.ಪಿ.ಇ ಅನುದಾನದಲ್ಲಿ ಗ್ರಂಥಾಲಯದ ಸೌಲಭ್ಯಗಳನ್ನು ಉನ್ನತೀಕರಿಸಲಾಗಿದೆ. ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್ ಸೌಲಭ್ಯ ಲಭ್ಯವಿದೆ.

ಉಪನ್ಯಾಸಕರ ಸಾಧನೆ : ಡಾ. ಶ್ರೀಧರ ಎಚ್.ಜಿ ಅವರು ಪ್ರಸ್ಥಾನ ಎಂಬ ಕಾದಂಬರಿಯನ್ನು ಪ್ರಕಟಿಸಿದ್ದಾರೆ. ಇವರು ಕನ್ನಡ ಸಾಹಿತ್ಯ ಪರಿಷತ್ ಪುತ್ತೂರು ತಾಲೂಕು ಘಟಕದ ಸನ್ಮಾನವನ್ನು ಸ್ವೀಕರಿಸಿದ್ದಾರೆ. ವಾಣಿಜ್ಯ ವಿಭಾಗದ ಮುಖ್ಯಸ್ಥೆ ಶ್ರೀಮತಿ ರವಿಕಲಾ, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಶ್ರೀ ಈಶ್ವರ ಪ್ರಸಾದ್ ಕೆ ಎಸ್, ಭೌತಶಾಸ್ತ್ರ ವಿಭಾಗದ ಶ್ರೀ ಶ್ರೀಶ ಭಟ್ ಇವರು ಪಿ.ಎಚ್.ಡಿ ಪದವಿಯನ್ನು ಗಳಿಸಿರುತ್ತಾರೆ. ಸಂಸ್ಥೆಯ ಹಲವು ಮಂದಿ ಉಪನ್ಯಾಸಕರು ವಿವಿಧ ಸಂಶೋಧನಾ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದಲ್ಲದೆ ಸಂಪನ್ಮೂಲ ವ್ಯಕ್ತಿಗಳಾಗಿ ಅಲ್ಲದೇ ಪ್ರತಿನಿಧಿಗಳಾಗಿ ಅಂತಾರಾಷ್ಟ್ರೀಯ, ರಾಷ್ಟ್ರೀಯ , ರಾಜ್ಯ ಮತ್ತು ಇನ್ನಿತರ ವೆಬಿನಾರ್‌ಗಳಲ್ಲಿ ಭಾಗವಹಿಸಿದ್ದಾರೆ.

ಗ್ರಾಮವಿಕಾಸ : ವಿವೇಕಾನಂದ ವಿದ್ಯಾವರ್ಧಕ ಸಂಘದ ಶತಮಾನೋತ್ಸವದ ನೆನಪಿಗಾಗಿ ಪ್ರಾರಂಭವಾದ ಗ್ರಾಮ ವಿಕಾಸ ಸಮಿತಿಯು ಕಾಲೇಜಿನಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದೆ. ನಮ್ಮ ಕಾಲೇಜು ಕೊಡಿಪ್ಪಾಡಿ ಗ್ರಾಮವನ್ನು ದತ್ತು ತೆಗೆದಿಕೊಂಡು ಕಳೆದ 6 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ವರ್ಷ ಕೊಡಿಪ್ಪಾಡಿ ಗ್ರಾಮದಲ್ಲಿ ಸ್ವಚ್ಛತೆ ಮತ್ತು ಕೋವಿಡ್-19 ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ರಕ್ಷಕ - ಶಿಕ್ಷಕ ಸಂಘ : 2020-21ನೇ ಸಾಲಿನ ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರಾಗಿ ಶ್ರೀ ಶಿವರಾಮ ಭಟ್ ಕೆ ಮತ್ತು ಡಾ. ಶ್ರೀಧರ ನಾಯ್ಕ್ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ. ಆರ್ಥಿಕವಾಗಿ ದುರ್ಬಲ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿಯನ್ನು ನೀಡುವುದರ ಮೂಲಕ ಈ ಸಂಘವು ಶೈಕ್ಷಣಿಕ ಚಟುವಟಿಕೆಗಳಿಗೆ ಬೆಂಬಲವನ್ನು ನೀಡಿದೆ.

ಹಿರಿಯ ವಿದ್ಯಾರ್ಥಿಗಳ ಸಂಘ : ಶ್ರೀ ಸತೀಶ್ ರಾವ್ ಇವರ ನೇತೃತ್ವದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘವು ಸಮಾಜಮುಖಿ ಕೆಲಸವನ್ನು ಮಾಡುವುದರ ಮೂಲಕ ಅತ್ಯಂತ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು ಕಾಲೇಜಿನ ಪ್ರಗತಿಗೆ ಸಹಕರಿಸುತ್ತಿದೆ.

ಸರ್ಟಿಫಿಕೇಟ್ ಕೋರ್ಸ್‌ಗಳು : ಕಾಲೇಜಿನ ಕೆಲವು ವಿಭಾಗಗಳು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಿರುತ್ತಾರೆ.

ವೆಬಿನಾರ್‌ಗಳು: ಕೋವಿಡ್-19 ಹಿನ್ನೆಲೆಯಲ್ಲಿ ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳನ್ನು ನಡೆಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಎಲ್ಲಾ ವಿಭಾಗಗಳ ವತಿಯಿಂದ ಆನ್‌ಲೈನ್ ಮೂಲಕ ಹಲವು ವೆಬಿನಾರ್‌ಗಳನ್ನು ಸಂಘಟಿಸಲಾಗಿದೆ.

ವಿಕಸನ ಟಿ.ವಿ ಸ್ಟುಡಿಯೋ ಮತ್ತು ಯುಟ್ಯೂಬ್ ಚಾನಲ್ : ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಕಳೆದ 4 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು ಸಕಾರಾತ್ಮಕ ಪತ್ರಿಕೋದ್ಯಮ ಶಿಕ್ಷಣವನ್ನು ಪಸರಿಸುತ್ತಿದೆ. ವಿಭಾಗಕ್ಕಾಗಿ ಸುಮಾರು 20 ಲಕ್ಷ ವೆಚ್ಚದಲ್ಲಿ ಅತ್ಯಂತ ಉತ್ಕೃಷ್ಟ ಸ್ಟುಡಿಯೊಂದನ್ನು ನಿರ್ಮಿಸಲಾಗಿದೆ. ವಿವೇಕಾನಂದ ಮಲ್ಟಿಮೀಡಿಯಾ ಸ್ಟುಡಿಯೋ ಮೂಲಕ ವಿಕಸನ ಟಿ.ವಿ ಎಂಬ ಯುಟ್ಯೂಬ್ ವಾಹಿನಿಯೊಂದನ್ನು ಆರಂಭಿಸಲಾಗಿದೆ. ಇದು ರಾಜ್ಯ ಮಟ್ಟದ ವಾಹಿನಿಯಂತೆ ಕಾರ್ಯನಿರ್ವಹಿಸುತ್ತಿದ್ದು, ಸುದ್ದಿ, ಸಂದರ್ಶನ, ವಿಶೇಷ ವರದಿ, ನೇರಪ್ರಸಾರ, ಚರ್ಚೆ, ಮನೋರಂಜನ ಕಾರ್ಯಕ್ರಮವೇ ಮೊದಲಾದ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಈ ಯುಟ್ಯೂಬ್ ವಾಹಿನಿಗೆ ರಾಜ್ಯ, ರಾಷ್ಟ್ರದ ನಾನಾಭಾಗಗಳಿಂದ ಸುಮಾರು 4000ಕ್ಕೂ ಮಿಕ್ಕಿ ನೋಡುಗ ಸದಸ್ಯರಿದ್ದಾರೆ ಎಂಬುದು ಉಲ್ಲೇಖಾರ್ಹ. ಹಲವು ವಿಶೇಷ ಕಾರ್ಯಕ್ರಮಗಳು, ಕೋವಿಡ್‌ಜಾಗೃತಿ ಕಾರ್ಯಕ್ರಮಗಳನ್ನು ಈ ವಾಹಿನಿಯು ಬಿತ್ತರಿಸಿದೆ.

ವಿದ್ಯಾರ್ಥಿಕ್ಷೇಮಪಾಲಕರು : ಡಾ. ಅರುಣ್ ಪ್ರಕಾಶ್, ಡಾ.ಶ್ರೀಧರ ಎಚ್.ಜಿ, ಶ್ರೀಮತಿ ಅಂಬಿಕಾ ಎನ್. ಆರ್, ಶ್ರೀಮತಿ ರೇಖಾ ನಾಯರ್, ಶ್ರೀಮತಿ ಅನ್ನಪೂರ್ಣ ಪಿ.ಜಿ, ಲೆ. ಬಿ.ಅತುಲ್ ಶೆಣೈ, ಶ್ರೀಮತಿ ಭಾಗ್ಯಶ್ರೀ ಕೆ, ಶ್ರೀ ಶ್ರೀನಾಥ್ ಬಿ, ಕು.ದೀಪಿಕಾ ಎಸ್, ಶ್ರೀ ಪ್ರಕಾಶ್‌ಕುಮಾರ್ ಪಿ, ಶ್ರೀ ಸೂರ್ಯನಾರಾಯಣ ಪಿ ಎಸ್, ಶ್ರೀ ದೀಕ್ಷಿತ್‌ಕೆ.ಜೆ, ಡಾ.ಸ್ಮಿತಾ ಪಿ.ಜಿ ಇವರು ವಿದ್ಯಾರ್ಥಿ ಕ್ಷೇಮಪಾಲಕರಾಗಿ ಸಹಕರಿಸುತ್ತಿದ್ದಾರೆ.

ಉದ್ಯೋಗ ಮತ್ತು ತರಬೇತಿ ಘಟಕ: ಅಂತಿಮ ಪದವಿ ವಿದ್ಯಾರ್ಥಿಗಳಿಗೆ ನೆರವಾಗುವ ದೃಷ್ಟಿಯಿಂದ ಉದ್ಯೋಗ ಮತ್ತು ತರಬೇತಿ ಘಟಕವು ಹಲವು ಕಾರ್ಯಕ್ರಮಗಳನ್ನು ನಡೆಸಿದೆ. ಹಲವು ವೆಬಿನಾರ್‌ಗಳು ನಡೆದಿವೆ.

ಸಿ.ಎ ಮತ್ತು ಸಿ.ಎಸ್ ಕೋರ್ಸುಗಳ ಬಗೆಗೆ ತರಬೇತಿಯನ್ನು ನೀಡಲು ಕಾಲೇಜಿನಲ್ಲಿ VICAS ಘಟಕವು ರಚನೆಗೊಂಡಿದ್ದು ವಿದ್ಯಾರ್ಥಿಗಳಲ್ಲಿ ಕೌಶಲ್ಯ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕೈಗಾರಿಕಾ ಭೇಟಿ ಹಾಗೂ ಅಧ್ಯಯನ : ಸ್ನಾತಕೋತ್ತರ ವಾಣಿಜ್ಯ ವಿಭಾಗದ ವತಿಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕೈಗಾರಿಕಾ ಕೇಂದ್ರಗಳಿಗೆ ಭೇಟಿ ಹಾಗೂ ಅಧ್ಯಯನ ಕಾರ್ಯಕ್ರಮಗಳು ಕಾಲೇಜಿನ ವತಿಯಿಂದ ನಡೆದಿವೆ.

ಯುವ ರೆಡ್ ಕ್ರಾಸ್ ಸೊಸೈಟಿ : ಯುವ ರೆಡ್ ಕ್ರಾಸ್ ಘಟಕ ಕಾಲೇಜಿನಲ್ಲಿ ಅಸ್ತಿತ್ವದಲ್ಲಿದ್ದು 226 ಸ್ವಯಂಸೇವಕರನ್ನು ಒಳಗೊಂಡಿದೆ. ವ್ಯಕ್ತಿತ್ವ ವಿಕಸನ, ಜನಜಾಗೃತಿ ಮತ್ತು ಇನ್ನಿತರ ಸೇವಾ ಕಾರ್ಯಕ್ರಮಗಳು ಈ ತರಬೇತಿ ಘಟಕದ ಮೂಲಕ ನಡೆಯುತ್ತಿದೆ.

ರಾಷ್ಟ್ರೀಯ ಸೇವಾ ಯೋಜನೆ: ಎರಡು ಘಟಕಗಳನ್ನು ಹೊಂದಿರುವ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ, ರಕ್ಷಾಬಂಧನ, ಸದ್ಭಾವನದಿನ, ಜೀವನ ಕೌಶಲ್ಯದ ಬಗ್ಗೆ ಕಾರ್ಯಗಾರ ಇತ್ಯಾದಿಗಳನ್ನು ನಡೆಸಲಾಗಿದೆ.

ಎನ್.ಸಿ.ಸಿ. : ಕಾಲೇಜಿನ ಎನ್..ಸಿ.ಸಿ ಘಟಕದಲ್ಲಿ ಒಟ್ಟು 160 ವಿದ್ಯಾರ್ಥಿಗಳು ಇದ್ದು ಅದರಲ್ಲಿ 108 ವಿದ್ಯಾರ್ಥಿಗಳು 52 ವಿದ್ಯಾರ್ಥಿನಿಯರು ತರಬೇತಿಯನ್ನು ಪಡೆಯುತ್ತಿದ್ದಾರೆ. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ತರಬೇತಿಯಲ್ಲಿ ಎನ್.ಸಿ.ಸಿ. ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ರೋವರ್ಸ್ ಮತ್ತು ರೇಂಜರ್ ಘಟಕ : ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ ಘಟಕವು ಕಾರ್ಯನಿರ್ವಹಿಸುತ್ತಿದ್ದು ಇದರ ಸದಸ್ಯರು ಹಲವು ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಭವಿಷ್ ಘಟಕ : ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಕಾಲೇಜಿನಲ್ಲಿ ಭವಿಷ್ ಘಟಕ ಪ್ರಾರಂಭಗೊಂಡಿದೆ. ಸಮಾಜಕ್ಕೆ ಉತ್ತಮ ಶಿಕ್ಷಕರನ್ನು ಕೊಡುಗೆ ನೀಡುವುದೇ ಇದರ ಸದುದ್ದೇಶವಾಗಿದೆ. 55 ವಿದ್ಯಾರ್ಥಿಗಳು ಘಟಕದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

ಯಶಸ್: ವಿವೇಕಾನಂದ ವಿದ್ಯಾವರ್ಧಕ ಸಂಘ (ರಿ) ಇದರ ವತಿಯಿಂದ ಐ.ಎ.ಎಸ್. ಐ.ಪಿಎಸ್ ಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ಬೆಳೆಸುವ ದೃಷ್ಟಿಯಿಂದ 'ಯಶಸ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದೆ. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು ಪರೀಕ್ಷೆ ಹಾಗೂ ಸಂದರ್ಶನಗಳಿಂದ ಆಯ್ಕೆ ಮಾಡಲಾಗುತ್ತದೆ. ಅವರ ವಸತಿ ನಿಲಯದಲ್ಲೇ ವಾಸ್ತವ್ಯ ಮಾಡಬೇಕು. ಕಾಲೇಜಿನ ತರಗತಿಗಳ ನಂತರ ಅವರಿಗೆ ವಿಶೇಷ ತರಗತಿಗಳನ್ನು ವಿಶೇಷ ಉಪನ್ಯಾಸಕರಿಂದ ತರಬೇತಿ ನೀಡುತ್ತಿದ್ದಾರೆ. ಒಟ್ಟು 65 ವಿದ್ಯಾರ್ಥಿಗಳು ತರಬೇತಿ ನೀಡುತ್ತಿದ್ದಾರೆ. ಇದು 5 ವರ್ಷಗಳ ಅವಧಿಯ ತರಬೇತಿಯಾಗಿದೆ.

ಪತ್ರಿಕೋದ್ಯಮ ವಿಭಾಗದ ವತಿಯಿಂದ 'ವಿನೂತನ' ಪಾಕ್ಷಿಕ ಪತ್ರಿಕೆ ಮತ್ತು 'ವಿಕಾಸ' ವಾರಪತ್ರಿಕೆ ಯು ವಿದ್ಯಾರ್ಥಿಗಳಿಗೆ ಬರವಣಿಗೆ, ಸಂಪಾದನೆ, ಪುಟವಿನ್ಯಾಸದ ಕುರಿತು ಪ್ರಾಯೋಗಿಕ ಜ್ಞಾನ ನೀಡುತ್ತದೆ.

ಧತ್ತಿ ನಿಧಿ ಬಹುಮಾನ: ಸಂಸ್ಥೆಯ ಮೇಲಿನ ಅಭಿಮಾನದಿಂದ ಹಲವು ಮಹನೀಯರು ನೀಡಿದ ಧತ್ತಿ ನಿಧಿ ಬಹುಮಾನಗಳನ್ನು ಆರ್ಥಿಕವಾಗಿ ಹಿಂದುಳಿದ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷದಂತೆ ಈ ಶೈಕ್ಷಣಿಕ ವರ್ಷವೂ ನೀಡಲಾಗಿದೆ.

ಕೋವಿಡ್ – 19 ಲಸಿಕಾ ಅಭಿಯಾನ : ಹದಿನೆಂಟು ವರ್ಷ ಮೇಲ್ಪಟ್ಟ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ದೃಷ್ಟಿಯಿಂದ ಜಿಲ್ಲಾ ಮತ್ತು ತಾಲೂಕು ವೈದ್ಯಾಧಿಕಾರಿಗಳು ಮತ್ತು

ತಂಡದವರ ಸಹಕಾರದಿಂದ ಕಾಲೇಜಿನಲ್ಲಿ ಲಸಿಕಾ ಅಭಿಯಾನವನ್ನು ಎರಡು ಮೂರು ಬಾರಿ ಆಯೋಜಿಸಲಾಗಿತ್ತು. ವಿಶೇಷ ಸಹಕಾರವನ್ನು ನೀಡಿದ ವೈದ್ಯಾಧಿಕಾರಿಗಳ ತಂಡಕ್ಕೆ ಈ ಸಂದರ್ಭದಲ್ಲಿ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕಾಲೇಜಿನ ಎನ್.ಸಿ.ಸಿ., ಎನ್.ಎಸ್.ಎಸ್., ಯೂತ್ ರೆಡ್ ಕ್ರಾಸ್, ರೋವರ್ಸ್ ಮತ್ತು ರೇಂಜರ್ ಘಟಕದ ವಿದ್ಯಾರ್ಥಿಗಳು ಬೇರೆ ಬೇರೆ ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರುವುದಲ್ಲದೇ, ವಿಶ್ವವಿದ್ಯಾನಿಲಯ ಪರೀಕ್ಷೆಯ ವೇಳೆಯಲ್ಲಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು, ಸ್ವಚ್ಛತೆಯ ಕುರಿತು ಮಾಹಿತಿ ನೀಡಲು ಸಹಕರಿಸಿರುತ್ತಾರೆ. ಎಲ್ಲಾ ವಿದ್ಯಾರ್ಥಿಗಳಿಗೆ ಧನ್ಯವಾದಗಳು.

ಸಂಸ್ಥೆಯ ಎಲ್ಲಾ ಕೆಲಸ ಕಾರ್ಯಗಳಲ್ಲಿ ಕಾಲೇಜಿನ ಆಡಳಿತಮಂಡಳಿ, ಸಹೋದ್ಯೋಗಿ ಮಿತ್ರರು, ವಿದ್ಯಾರ್ಥಿ ವೃಂದ, ರಕ್ಷಕ–ಶಿಕ್ಷಕ ಸಂಘ, ಹಿರಿಯ ವಿದ್ಯಾರ್ಥಿಗಳು, ಸರಕಾರಿ ಕಛೇರಿಗಳು, ಸಾರ್ವಜನಿಕರು ಮನ:ಪೂರ್ವಕವಾಗಿ ಸಹಕಾರ ನೀಡುತ್ತಿದ್ದಾರೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ನಮ್ಮ ಸಂಸ್ಥೆಗಳಾದ ವಿವೇಕಾನಂದ ಪದವಿಪೂರ್ವ ಕಾಲೇಜು, ನರೇಂದ್ರ ಪದವಿ ಪೂರ್ವ ಕಾಲೇಜು, ವಿವೇಕಾನಂದ ಕಾನೂನು ಕಾಲೇಜು, ವಿವೇಕಾನಂದ ತಾಂತ್ರಿಕ ಕಾಲೇಜು, ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯ, ವಿವೇಕಾನಂದ ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆ ಇವುಗಳ ಮುಖ್ಯ ಗುರುಗಳು ಮತ್ತು ಸಿಬ್ಬಂದಿಗಳು ಪೂರ್ಣ ಸಹಕಾರ ನೀಡಿದ್ದಾರೆ. ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ವಿಶ್ವವಿದ್ಯಾನಿಲಯ, ಕಾಲೇಜು ಅಭಿವೃದ್ಧಿ ಮಂಡಳಿ, ಸೇವಾ ಸಂಘ ಸಂಸ್ಥೆಗಳು, ಬ್ಯಾಂಕ್‌ಗಳು, ಅಂಚೆ, ಪೋಲೀಸ್ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಿದ್ಯುತ್ ಇಲಾಖೆ, ಪುತ್ತೂರು ಕೇಬಲ್ ನೆಟ್‌ವರ್ಕ, ಪತ್ರಕರ್ತರು ಮುಂತಾದವರಿಗೂ ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಬದುಕೆಂಬುದು ಒಂದು ಋಣದ ರತ್ನದ ಗಣಿ. ಎಷ್ಟೋ ಜನರಿಗೆ ಎಷ್ಟೋ ರೀತಿಯಲ್ಲಿ ನಾವೆಲ್ಲ ಸದಾ ಋಣಿಗಳು. ಅರಿತ, ಅರಿವಿಗೆ ಮೀರಿದ, ತಿಳದ, ತಿಳಿವೆಗೆಬಾರದ, ಮರೆತ, ಮರೆದುಳಿದ ಎಲ್ಲ ಸಹಾಯಹಸ್ತಗಳಿಗೆ ನಮನಗಳು.

ಎಲ್ಲರಿಗೂ ನಮಸ್ಕಾರ